ಸಂ.ಕೆ.ಪಿ.ಎಲ್.ಸಿ/ಆಡಳಿತ/ಸಿಆರ್/192/15-16 ದಿನಾಂಕ: 01.08.2015

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ, ಬಹು ಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ನಿಯಮಿತ ರವರಿಗೆ ಅಧಿಕಾರ ಪ್ರತ್ಯಾಯೋಜನೆ ಬಗ್ಗೆ ಸಮರ್ಥನೀಯ ಕಾರಣಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ:1 ಈ ನಿಗಮದ ಪತ್ರ ಸಂಖ್ಯೆ ಕೆಪಿಎಲ್‌ಸಿ/ಸಿಬ್ಬಂದಿ/ವಹಿ/03/13-14, ದಿನಾಂಕ: 27.05.2015 ಹಾಗೂ ಸಮ ಸಂಖ್ಯೆಯ ಪತ್ರ ದಿನಾಂಕ: 01.06.2015.

2 ಈ ನಿಗಮದ ಪತ್ರ ಸಂಖ್ಯೆ ಕೆಪಿಎಲ್‌ಸಿ/ಆಡಳಿತ/ಸಿಅರ್/196/15-16, ದಿನಾಂಕ: 10.06.2015 ಮತ್ತು 21.07.2015

3 ಸರ್ಕಾರದ ಪತ್ರ ಸಂಖ್ಯೆ ಆರ್‌ಡಿ/253/ಎಲ್‌ಜಿಬಿ/2015, ದಿನಾಂಕ: 23.07.2015.

***

ಸರ್ಕಾರಿ ಜಮೀನು ಒತ್ತುವರಿ ತೆರವು, ಸಂರಕ್ಷಣೆ ಹಾಗೂ ಅಭಿವೃದ್ಧಿಪಡಿಸುವ ಎಲ್ಲಾ ಕಾರ್ಯಚಟುವಟಿಕೆಗಳನ್ನು ಸಮರ್ಪಕ ಹಾಗೂ ಪರಿಣಾಮಕಾರಿಯಾಗಿ ಈ ನಿಗಮದ ವತಿಯಿಂದ ಕಾರ್ಯಗತಗೊಳಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಹಾಗೂ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು ಎಂದು ಪದನಮೀಕರಿಸಲು ಕೋರಿ ಈ ನಿಗಮದ ದಿನಾಂಕ: 27.05.2015ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಮುಂದುವರೆದು, ಸರ್ಕಾರಿ ಜಮೀನು ಒತ್ತುವರಿ ತೆರವು ಪ್ರಕ್ರಿಯೆ ಇನ್ನಷ್ಟು ತೀವ್ರಗೊಳಿಸುವುದು, ಕಬಳಿಕೆಯಾಗಿರುವ ಸರ್ಕಾರಿ ಜಮೀನುಗಳನ್ನು ಹಿಂಪಡೆಯಲು ಎಲ್ಲಾ ಅಗತ್ಯ ಕ್ರಮಗಳನ್ನು ಜರುಗಿಸುವುದು, ಒತ್ತುವರಿಯಿಂದ ಹಿಂಪಡೆದ ಸರ್ಕಾರಿ ಜಮೀನುಗಳು ಹಾಗೂ ಒತ್ತುವರಿಯಿಂದ ಮುಕ್ತವಾಗಿರುವ ಸರ್ಕಾರಿ ಜಮೀನುಗಳು ಭವಿಷ್ಯದಲ್ಲಿ ಒತ್ತುವರಿಯಾಗದಂತೆ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು, ಮತ್ತು ಅಂತಹ ಜಮೀನುಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವುದು, ಸರ್ಕಾರಿ ಇಲಾಖೆಗಳು/ಸರ್ಕಾರಿ ಸಂಸ್ಥೆಗಳಿಗೆ ಸರ್ಕಾರಿ ಜಮೀನಿನ ಹಂಚಿಕೆ ಮುಂತಾದ ಕಾರ್ಯ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಈ ನಿಗಮದ ಪ್ರಮುಖ ಧ್ಯೇಯೋದ್ದೇಶಗಳನ್ನು ನೆರವೇರಿಸುವ ದಿಸೆಯಲ್ಲಿ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವನ್ನು ಸಾಕಷ್ಟು ಪ್ರಬಲ ಹಾಗೂ ಬಲಿಷ್ಠಗೊಳಿಸುವ ಬಗ್ಗೆ ಈ ನಿಗಮದಿಂದ ಉಲ್ಲೇಖ(2)ರ ಪತ್ರಗಳ ಅನ್ವಯ ಸರ್ಕಾರಕ್ಕೆ ಸವಿವರವಾದ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ ಹಾಗೂ ತದನಂತರ ಸದರಿ ಪ್ರಸ್ತಾವನೆಗೆ ಸಮರ್ಥನೀಯ ವಿವರಣೆಗಳನ್ನು ಸಹ ಸಲ್ಲಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಗಳಿಗೆ ಪೂರಕವಾಗಿ ಈ ನಿಗಮ ಕಾರ್ಯನಿರ್ವಹಿಸಲು ಹಾಗೂ ಜಿಲ್ಲಾಡಳಿತ ಮತ್ತು ಕ್ಷೇತ್ರಮಟ್ಟದ ಅಧಿಕಾರಿಗಳು ಈ ನಿಗಮದ ಅಗತ್ಯತೆಗೆ ಅನುಗುಣವಾಗಿ ಸಮನ್ವಯಿಸಲು ಅನುವಾಗುವಂತೆ ಈ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಕೆಲವೊಂದು ಕರ್ತವ್ಯಗಳು ಹಾಗೂ ಅಧಿಕಾರ ನಿಗದಿಪಡಿಸಿ ಸೂಕ್ತ ಆದೇಶ ಹೊರಡಿಸಲು ಉಲ್ಲೇಖ(1)ರ ದಿನಾಂಕ: 01.06.2015ರ ಪತ್ರದ ಅನ್ವಯ ಸರ್ಕಾರವನ್ನು ಕೋರಲಾಗಿತ್ತು. ಈ ಪ್ರಸ್ತಾವನೆ ಬಗ್ಗೆ ಉಲ್ಲೇಖ(3)ರ ಸರ್ಕಾರದ ಪತ್ರದಲ್ಲಿ, ಈ ನಿಗಮದಿಂದ ಪ್ರಸ್ತಾಪಿಸಿರುವ ಪ್ರತಿಯೊಂದು ಅಧಿಕಾರ ಪ್ರತ್ಯಾಯೋಜನೆಗೆ ಸಂಬಂಧಿಸಿದಂತೆ ಸಕಾರಣಗಳನ್ನು ಒದಗಿಸಲು ಕೋರಿರುವ ಮೇರೆಗೆ ಈ ಮುಂದಿನ ಅಂಶಗಳನ್ನು ಸರ್ಕಾರದ ಅವಗಾಹನೆಗೆ ಸಲ್ಲಿಸಿದೆ.

1. ಈ ನಿಗಮದ ಮೆಮೊರ್ಯಾಂಡಮ್ ಆಫ್ ಅಸೋಸಿಯೇಷನ್(MoA) ಅನ್ವಯ ಸರ್ಕಾರಿ/ಶಾಸನಾತ್ಮಕ ಸಂಸ್ಥೆಗಳಿಗೆ ಸೇರಿದ ಜಮೀನುಗಳ ವ್ಯವಹರಣೆ ಮಾಡುವುದು, ಅಭಿವೃದ್ಧಿಪಡಿಸಿ ಉಪಯುಕ್ತವಾಗಿ ಬಳಸುವುದು ನಿಗಮದ ಮುಖ್ಯ ಧ್ಯೇಯೊದ್ದೇಶಗಳಾಗಿರುತ್ತವೆ. ರಾಜ್ಯದ ಸರ್ಕಾರಿ ಜಮೀನುಗಳ ಒತ್ತುವರಿ ಹಾಗೂ ಒತ್ತುವರಿಯಿಂದ ಹಿಂಪಡೆದ ಜಮೀನುಗಳ ಮಾಹಿತಿ ಸಂಗ್ರಹಿಸುವುದರ ಮೂಲಕ ಸರ್ಕಾರಿ ಜಮೀನು ದತ್ತಾಂಶ ಕ್ರೋಢೀಕರಣ, ಒತ್ತುವರಿಯಿಂದ ಹಿಂಪಡೆದ ಜಮೀನುಗಳನ್ನು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡುವುದು, ಹಾಗೂ ಒತ್ತುವರಿಯಾಗದಂತೆ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳುವುದು ಈ ನಿಗಮದ ಉಪ ಧ್ಯೇಯೋದ್ದೇಶಗಳಾಗಿರುತ್ತವೆ.

   ಈ ನಿಗಮ ಸ್ಥಾಪನೆಯಾದ ನಂತರ ದಿನಾಂಕ: 19.9.2009ರ ಸರ್ಕಾರಿ ಅದೇಶಲ್ಲಿ ಸರ್ಕಾರಿ ಜಮೀನು ಸಂರಕ್ಷಣಾ ಕಾಯಪಡೆ ರಚನೆ ಮಾಡಲಾಗಿತ್ತು. ಸದರಿ ಕಾರ್ಯಪಡೆಗೆ ವ್ಯವಸ್ಥಾಪಕ ನಿರ್ದೇಶಕರನ್ನು ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ಇವರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ಮಾಡಲಾಗಿತ್ತು. ಈ ಹಿನ್ನೆಲಿಯಲ್ಲಿ ಈ ನಿಗಮ ಜಿಲ್ಲಾಧಿಕಾರಿಗಳೊಂದಿಗೆ ಸಮನ್ವಯಿಸಿ ಸರ್ಕಾರಿ ಜಮೀನು ಒತ್ತವರಿ ಪ್ರಕ್ರಿಯೆಗಳನ್ನು ಸಾಕಷ್ಟು ಚುರುಕುಗೊಳಿಸಿ ಕಾರ್ಯಪಡೆಗೆ ಅಗತ್ಯ ಮಾಹಿತಿಗಳನ್ನು ಒದಗಿಸುವುದರ ಮೂಲಕ ಅಗತ್ಯ ಸಹಕಾರವನ್ನು ನೀಡಿರುತ್ತದೆ. ಸದರಿ ಕಾರ್ಯಪಡೆ ಅಧ್ಯಕ್ಷರು ದಿನಾಂಕ: 4.07.2011ರಂದು ವರದಿ ನೀಡಿರುತ್ತಾರೆ. ಇದಾದ ನಂತರ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸುವ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಸಾರ್ವಜನಿಕ ರಿಟ್ ಅಜಿ ಕ್ರಮಾಕ: 15500/2013 ಮತ್ತು 15511–14/2013 ದಾಖಲಾಗಿದ್ದು, ವಿಚಾರಣೆ ನಡೆಯುತ್ತಿದೆ. ಈ ಸಂಬಂಧವಾಗಿ ಸರ್ಕಾರದ ಸುತ್ತೋಲೆ ಕ್ರಮಾಂಕ: ಕ್ರಮಾಂಕ: ಆರ್‌ಡಿ/155/ಎಲ್‌ಜಿಎಕ್ಸ್/2013, ದಿನಾಂಕ: 23.12.2013 ಹಾಗೂ ಸರ್ಕಾರದ ಅದೇಶ ಸಂಖ್ಯೆ ಆರ್‌ಡಿ/155/ಎಲ್‌ಜಿಎಕ್ಸ್/2013, ದಿನಾಂಕ: 19.08.2014 ರಲ್ಲಿ ಸರ್ಕಾರಿ ಜಮೀನು ಒತ್ತುವರಿ ತೆರವು ಪ್ರಕ್ರಿಯೆಗಳನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕೆಲವೊಂದು ನಿರ್ದಿಷ್ಟ ಸೂಚನೆಗಳನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ಸಮನ್ವಯ ಪ್ರಾಧಿಕಾರವಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅನುವಾಗುವಂತೆ ಈ ನಿಗಮಕ್ಕೆ ಸ್ಪಷ್ಟ ಮತ್ತು ನಿರ್ದಿಷ್ಟ ಕರ್ತವ್ಯ, ಜವಾಬ್ದಾರಿ ಮತ್ತು ನಿಯಂತ್ರಣ ಅಧಿಕಾರ ನೀಡುವ ಅಗತ್ಯವಿದೆ. ಇದಲ್ಲದೆ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 15500/2013 ಪ್ರಕರಣದಲ್ಲಿ ದಿನಾಂಕ: 28.04.2015ರ ನಡವಳಿಯಲ್ಲಿ ಈ ಮುಂದಿನ ಅಂಶವನ್ನು ದಾಖಲಿಸಲಾಗಿದೆ.

> "1……
>
> 2. Learned AGA submits that all the lands which were recovered by removing the encroachments were protected and sufficient fund is allocated to respondent No.2 the Karnataka Public Lands Corporations Limited. Learned counsel appearing for respondent

No.2 expressed inability of the Corporation in protecting such recovered lands **<u>because of the assumed lack of power</u>**. In fact, it has to be the primary duty of the Corporation to protect public lands, but the Corporation appears to have carved its own limitations and abdicated its duty by not reporting any particular area which it could claim to have protected outside Bengaluru District. Therefore, question could be raised about the utility and importance of respondent No.2 Corporation and it has to justify its own existence. It is obvious that if the lands which are recovered by removing encroachments cannot be protected from being encroached again, then the whole drive would become meaningless.
3……….”

(Emphasis supplied)

2. ಜಿಲ್ಲಾಧಿಕಾರಿಗಳು ಒದಗಿಸಿರುವ ಮಾಹಿತಿ ಅನ್ವಯ ಒಟ್ಟು 13.02 ಲಕ್ಷ ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿರುತ್ತದೆ. ಕಳೆದ 6 ½ ವರ್ಷಗಳಲ್ಲಿ ಕರ್ನಾಟಕ ಸಾರ್ವಜನಿಕ ಜಮೀನಿಗಳ ನಿಗಮದ ಸತತ ಪ್ರಯತ್ನದಿಂದಾಗಿ ಇದುವರೆಗೆ ಕೇವಲ 2.30 ಲಕ್ಷ ಎಕರೆ ಮಾತ್ರ ತೆರವುಗೊಳಿಸಲಾಗಿರುತ್ತದೆ. ಹಾಗೂ 10.82 ಲಕ್ಷ ಎಕರೆ ತೆರವುಗೊಳಿಸಲು ಬಾಕಿ ಇರುತ್ತದೆ. ಒತ್ತುವರಿ ತೆರವು ಕಾರ್ಯ ಇದೇ ಗತಿಯಲ್ಲಿ ಮುಂದುವರೆದಲ್ಲಿ, ಬಾಕಿ ಇರುವ ಒತ್ತುವರಿ ಜಮೀನುಗಳನ್ನು ಬಿಡಿಸಿಕೊಳ್ಳಲು ಇನ್ನೂ 30–40 ವರ್ಷಗಳ ಕಾಲ ತೆಗೆದುಕೊಳ್ಳುತ್ತದೆ. ಇದಲ್ಲದೆ ಒಂದು ಕಡೆ ಒತ್ತುವರಿ ತೆರವುಗೊಳಿಸಿದರೆ, ಇನ್ನೊಂದು ಕಡೆ ಹೊಸ ಒತ್ತುವರಿಗಳು ಹುಟ್ಟಿಕೊಳ್ಳುತ್ತವೆ. ಇದರಿಂದ ತೆರವು ಕಾರ್ಯ ಸಮರ್ಪಕವಾಗಿ ಅಪೇಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ ಎಂಬ ಅಂಶ ಸ್ಪಷ್ಟಪಡುತ್ತದೆ. ಈ ಹಿನ್ನೆಲೆಯಲ್ಲಿ ಒತ್ತುವರಿ ಪ್ರಕ್ರಿಯೆಯನ್ನು ತೀವ್ರಗೊಳಿವುದು ಹಾಗೂ ಒತ್ತುವರಿಯಿಂದ ಹಿಂಪಡೆದ ಹಾಗೂ ಒತ್ತುವರಿಯಿಂದ ಮುಕ್ತವಾಗಿರುವ ಜಮೀನುಗಳು ಭವಿಷ್ಯದಲ್ಲಿ ಒತ್ತುವರಿಯಾಗದಂತೆ ಸಂರಕ್ಷಣಾ ಕ್ರಮಗಳನ್ನು ತೀವ್ರವಾಗಿ ಹಾಗೂ ಬಂದೋಬಸ್ತಾಗಿ ಮಾಡಬೇಕಾಗುತ್ತದೆ. ಇದಲ್ಲದೆ, ನ್ಯಾಯಲಯ ಪ್ರಕರಣಗಳಲ್ಲಿ ಒಳಗೊಂಡಿರುವ ಸರ್ಕಾರಿ ಜಮೀನುಗಳು, ನಿಯಮ ಬಾಹಿರವಾಗಿ ಸಕ್ರಮಗೊಳಿಸಿರುವ ಪ್ರಕರಣಗಳು, ಬಾಕಿ ಇರುವ ಸಕ್ರಮೀಕರಣ ಅರ್ಜಿಗಳ ಶೀಘ್ರ ವಿಲೇವಾರಿ ಮುಂತಾದ ವಿಚಾರಗಳಲ್ಲಿ ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

3. ಮುಂದುವರೆದು, ನಿಗಮದ ಒಂದು ಉಪ ಧ್ಯೇಯೋದ್ಧೇಶವಾಗಿರುವ ಸರ್ಕಾರಿ ಜಮೀನು ದತ್ತಾಂಶ ಕ್ರೋಢೀಕರಣ ಮಾಡುವ ನಿಟ್ಟಿನಲ್ಲಿ, ಮೊದಲನೆಯ ಹಂತವಾಗಿ, ರಾಜ್ಯದಾದ್ಯಂತ ಇರುವ ಕೆರೆಗಳ ಮಾಹಿತಿಗಳನ್ನು ಸಂಗ್ರಹಿಸಿ, ಸರ್ಕಾರಿ ಕೆರೆಗಳು ಹಾಗೂ ಕೆರೆಗಳಲ್ಲಿನ ಒತ್ತುವರಿ ಮಾಹಿತಿಗಳನ್ನು ಸಾರ್ವಜನಿಕರಿಗೆ ಒದಗಿಸುವ ನಿಟ್ಟಿನಲ್ಲಿ ಈ ನಿಗಮದ ವತಿಯಿಂದ ಒಂದು ತಂತ್ರಾಂಶವನ್ನು ಸಿದ್ದಪಡಿಸಲಾಗಿರುತ್ತದೆ. ಸದರಿ ತಂತ್ರಾಂಶವನ್ನು ಮಾನ್ಯ ಕಂದಾಯ ಸಚಿವರು 2014ನೇ ಮೇ ತಿಂಗಳಿನಲ್ಲಿ ಲೋಕಾರ್ಪಣೆ ಮಾಡಿರುತ್ತಾರೆ. ಈ ತಂತ್ರಾಂಶದಲ್ಲಿ ಕ್ಷೇತ್ರಮಟ್ಟದ ಅಧಿಕಾರಿಗಳು ದತ್ತಾಂಶ ನಮೂದು ಮಾಡಬೇಕಾಗಿದ್ದು, ಇದುವರೆಗೆ ಕೇವಲ 15,689 ಕೆರೆಗಳ ಸಾಮನ್ಯ ಮಾಹಿತಿಗಳನ್ನು ಮಾತ್ರ ನಮೂದು ಮಾಡಿರುತ್ತಾರೆ. ಆದರೆ, ಮಹತ್ವದ ಮಾಹಿತಿಗಳಾದ ಒತ್ತುವರಿ ದತ್ತಾಂಶ, ಒತ್ತುವರಿ ತೆರವು ಮಾಹಿತಿ, ನ್ಯಾಯಾಲಯ ಪ್ರಕರಣಗಳ ಮಾಹಿತಿ, ಅಭಿವೃದ್ಧಿ ಕಾಮಗಾರಿಗಳ ಮಾಹಿತಿಗಳನ್ನು ನಮೂದಿಸಬೇಕಾಗಿರುತ್ತದೆ. ಈ ಬಗ್ಗೆ ಭೂಮಿ ಉಸ್ತುವಾರಿ ಕೋಶದಿಂದ ಪಡೆದಿರುವ ಮಾಹಿತಿ ಅನ್ವಯ ಸುಮಾರು 37,000 ಸರ್ವೆ ನಂಬರುಗಳು ಕೆರೆ/ಕಟ್ಟೆ/ಕುಂಟೆ ಎಂದು ವರ್ಗೀಕೃತವಾಗಿರುವುದು ವ್ಯಕ್ತವಾಗುತ್ತದೆ. ಬಾಕಿ ಕೆರೆಗಳ ದತ್ತಾಂಶಗಳ ನಮೂದು ಕಾರ್ಯವನ್ನು ಪೂರ್ಣ ಪ್ರಮಾಣದಲ್ಲಿ, ನಿರ್ದಿಷ್ಟ ಕಾಲಮಿತಿಯೊಳಗೆ ಪೂರ್ಣಗೊಳಿಸಿದಲ್ಲಿ ಮಾತ್ರ ತಂತ್ರಾಂಶದ ಉದ್ದೇಶ ಸಫಲವಾಗುತ್ತದೆ. ಇದುವರೆಗೆ ನಮೂದು

ಮಾಡಿರುವ ದತ್ತಾಂಶಗಳಲ್ಲಿ ಸಹ ಸಾಕಷ್ಟು ನ್ಯೂನ್ಯತೆಗಳು ಉಂಟಾಗಿರುತ್ತವೆ. ಇವುಗಳನ್ನು ಸರಿಪಡಿಸಬೇಕಾಗಿರುತ್ತದೆ. ಈ ಬಗ್ಗೆ ತ್ವರಿತ ಕ್ರಮ ಜರುಗಿಸದಿದ್ದಲ್ಲಿ ತಂತ್ರಾಂಶ ಸಿದ್ದಪಡಿಸಿದ ಉದ್ದೇಶವೇ ಪರಾಭವಗೊಳ್ಳುವ ಸಾಧ್ಯತೆಗಳು ಇವೆ.

4. ಸಾರ್ವಜನಿಕರು ಸರ್ಕಾರಿ ಜಮೀನು ಒತ್ತುವರಿಯಾಗಿರುವ ಬಗ್ಗೆ ನಿರ್ದಿಷ್ಟ ದೂರುಗಳನ್ನು ಈ ನಿಗಮಕ್ಕೆ ನೀಡುತ್ತಿದ್ದು, ಇವುಗಳನ್ನು ಕ್ಷೇತ್ರಮಟ್ಟದ ಅಧಿಕಾರಿಗಳಾದ ಜಿಲ್ಲಾಧಿಕಾರಿ, ತಹಸೀಲ್ದಾರ್ ಮತ್ತು ಇನ್ನಿತರ ಅಧಿಕಾರಿಗಳಿಗೆ ಕಳುಹಿಸಿ, ಸದರಿ ದೂರುಗಳ ಬಗ್ಗೆ ಪರಿಶೀಲನೆ ಮಾಡಿ, ಒತ್ತುವರಿ ತೆರವುಗೊಳಿಸಲು ಅಗತ್ಯ ಕಾನೂನು ಕ್ರಮಗಳನ್ನು ಜರುಗಿಸಲು ಸೂಚಿಸಲಾಗುತ್ತಿದೆ. ವಿವಿಧ ಅಧಿಕಾರಿಗಳಿಗೆ ಕಳುಹಿಸಿರಿವ ದೂರಿನ ವಿವರ ಈ ಮುಂದಿನಂತಿವೆ:

| ಕ್ರ.ಸಂ | ದೂರು ಕಳುಹಿಸಲ್ಪಟ್ಟಿರುವ ಕಛೇರಿ | ಒಟ್ಟು ದೂರುಗಳು | ಇತ್ಯರ್ಥ ಅಗಿರುವುದು | ಬಾಕಿ ಇರುವುದು |
|---|---|---|---|---|
| 1 | ಜಿಲ್ಲಾಧಿಕಾರಿಗಳು | 463 | 103 | 360 |
| 2. | ಉಪ ವಿಭಾಗಾಧಿಕಾರಿಗಳು | 8 | 0 | 8 |
| 3. | ಅರಣ್ಯ/ಎ.ಸಿ.ಎಫ್. | 17 | 5 | 12 |
| 4 | ತಹಸಿಲ್ದಾರ್ | 1659 | 528 | 1131 |
| 5. | ಸಿಎಂಸಿ/ಟಿಎಂಸಿ/ಇತ್ತಾದಿ | 180 | 31 | 149 |
| | ಒಟ್ಟು | 2327 | 667 | 1660 |

ಅವಧಿವಾರು ಬಾಕಿ ವಿವರ:

| ವರ್ಷ | 2009 | 2010 | 2011 | 2012 | 2013 | 2014 | 2015 |
|---|---|---|---|---|---|---|---|
| ಒಟ್ಟು ದೂರುಗಳು | 257 | 932 | 643 | 159 | 123 | 151 | 61 |
| ಇತ್ಯರ್ಥ ಅಗಿರುವುದು | 110 | 405 | 132 | 19 | 0 | 0 | 0 |
| ಬಾಕಿ ಇರುವುದು | **147** | **527** | **511** | **140** | **123** | **151** | **61** |

ಒಟ್ಟು ದಾಖಲಾಗಿರುವ 2327 ದೂರುಗಳ ಪೈಕಿ 667 ದೂರುಗಳು ಮಾತ್ರ ಇತ್ಯರ್ಥವಾಗಿರುತ್ತವೆ. ಬಾಕಿ 1660 ದೂರುಗಳಲ್ಲಿ ಇನ್ನೂ ಕ್ರಮ ಜರುಗಿಸಿದ ಬಗ್ಗೆ ವರದಿ ಬಾಕಿ ಇದೆ. ಇವುಗಳ ಪೈಕಿ 1325 ದೂರುಗಳು 2 ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುತ್ತವೆ. ಸಾಕಷ್ಟು ಹಳೆಯ ಪ್ರಕರಣಗಳನ್ನೂ ಸಹ ಆದ್ಯತೆ ಮೇಲೆ ಇತ್ಯರ್ಥಪಡಿಸುತ್ತಿಲ್ಲ ಎಂಬ ಅಂಶ ದೃಢಪಡುತ್ತದೆ. ಅದ್ದರಿಂದ ಕ್ಷೇತ್ರಮಟ್ಟದ ಸಾರ್ವಜನಿಕ ದೂರುಗಳನ್ನು ಅತಿ ಜರೂರಾಗಿ ಪರಿಶೀಲಿಸಿ, ಒತ್ತುವರಿ ದೃಢಪಟ್ಟಲ್ಲಿ ಕಾನೂನು ಕ್ರಮ ಜರುಗಿಸುವ ಬಗ್ಗೆ ಅಧಿಕಾರಿಗಳಲ್ಲಿ ಹೆಚ್ಚಿನ ಜಗೃತಿ ಮತ್ತು ಜವಾಬ್ದಾರಿಯನ್ನು ಮೂಡಿಸುವ ಅವಶ್ಯಕತೆ ಬಹಳವಾಗಿದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ನಿಗಮದೊಂದಿಗೆ ಸ್ಪಂದಿಸಬೇಕಾಗುತ್ತದೆ. ದೂರುಗಳನ್ನು ಇತ್ಯರ್ಥಪಡಿಸುವ ಮೂಲಕ ಸಾರ್ವಜನಿಕರ ವಿಶ್ವಾಸಕ್ಕೆ ಪಡೆಯುವುದು ಅಗತ್ಯವಿದೆ. ಈ ಪ್ರಕ್ರಿಯೆಯನ್ನು ತ್ವರಿತಗೊಳಿಸಿ, ಸಂಬಂಧಪಟ್ಟ ಅಧಿಕಾರಿಗಳು ದೂರುಗಳನ್ನು ನಿಗದಿತ ಸಮಯದಲ್ಲಿ ಬಗೆಹರಿಸಿದ ಬಗ್ಗೆ ಮೇಲುಸ್ತುವಾರಿ ಮಾಡುವ ಅವಶ್ಯಕತೆ ಇದೆ. ಅದ್ದರಿಂದ ಸರ್ಕಾರಿ ಜಮೀನುಗಳ ಒತ್ತವರಿ ಬಗ್ಗೆ ಸಾರ್ವಜನಿಕ ದೂರುಗಳಿಗೆ ಸಂಬಂಧಪಟ್ಟಂತೆ ಈ ನಿಗಮವನ್ನು ಬಲಿಷ್ಟಗೊಳಿಸಬೇಕಾಗಿದೆ.

5. ಒತ್ತುವರಿ ತೆರವು ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಜಿಲ್ಲಾಡಳಿತ ಹಾಗೂ ಕ್ಷೇತ್ರಮಟ್ಟದ ಅಧಿಕಾರಿಗಳಿಗೆ ಒತ್ತುವರಿ ತೆರವುಗೊಳಿಸಲು ಸೂಚನೆ ನೀಡಿದ ಮಾತ್ರಕ್ಕೆ ಉದ್ದೇಶ ನೆರವೇರುವುದಿಲ್ಲ, ತತ್ಸಂಬಂಧ ಅಗತ್ಯ ವಿರುವ ಮಾನವ ಸಂಪನ್ಮೂಲ, ಮೂಲಭೂತ ಸೌಕರ್ಯ ಮತ್ತು ಪರಿಕರಗಳನ್ನು ಸಹ ಜಿಲ್ಲಾಡಳಿತ ಹಾಗೂ ಕ್ಷೇತ್ರಮಟ್ಟದ ಅಧಿಕಾರಿಗಳಿಗೆ ಒದಗಿಸಬೇಕಾಗುತ್ತದೆ. ಸರ್ಕಾರಿ ಜಮೀನುಗಳ ವ್ಯವಹರಣೆ, ಹಾರಾಜು, ಒತ್ತುವರಿ ತೆರವು ಮುಂತಾದ ಕಾರ್ಯಗಳಿಗೆ ಆಗುವ ವೆಚ್ಚಗಳನ್ನು ಪರಿಶೀಲಿಸಿ, ಸರ್ಕಾರದ ಅನುಮೋದನೆ ಪಡೆಯಲು ಹಾಗೂ ವೆಚ್ಚಗಳನ್ನು

ಅನುಷ್ಠಾನಾಧಿಕಾರಿಗಳಿಗೆ ತ್ವರಿತವಾಗಿ ಪಾವತಿಸುವ ನಿಟ್ಟಿನಲ್ಲಿಯೂ ಸಹ ಈ ನಿಗಮ ಜಿಲ್ಲಾಡಳಿತ ಮತ್ತು ಸರ್ಕಾರದ ನಡುವೆ ಸಮನ್ವಯ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇಂತಹ ಅಗತ್ಯತೆಗಳ ಬಗ್ಗೆ ಪರಾಮರ್ಷಿಸಿ, ಸೂಕ್ತ ತೀರ್ಮಾನಗಳನ್ನು ಕೈಗೊಂಡು ನಿಗದಿತ ಸಮಯದಲ್ಲಿ ವೆಚ್ಚಗಳನ್ನು ಭರಿಸಬೇಕಾಗುತ್ತದೆ. ಈ ಕಾರ್ಯವನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ಸಲುವಾಗಿ ಈ ನಿಗಮಕ್ಕೆ ಅಧಿಕಾರ ಹಾಗೂ ಜವಬ್ದಾರಿಯನ್ನು ನೀಡುವುದು ಅಗತ್ಯ.

6. ಈ ನಿಗಮದ ಮೆಮೊರ್‍ಯಾಂಡಂ ಆಫ್ ಅಸೋಸಿಯೇಷನ (MoA) ಪ್ರಕಾರ ಕರ್ನಾಟಕ ಸರ್ಕಾರಕ್ಕೆ ಸೇರಿದ ಜಮೀನುಗಳ ಮಾರಾಟ ಮಾಡುವುದು, ಖರೀದಿಸುವುದು ಅಥವಾ ಇನ್ನಾವುದೇ ರೀತಿಯಲ್ಲಿ ವ್ಯವಹರಣೆಗಳನ್ನು ನಡೆಸುವುದು ಹಾಗೂ ಅವುಗಳನ್ನು ವಿವಿಧ ಸರ್ಕಾರಿ ಸಂಸ್ಥೆಗಳಿಗೆ ಒದಗಿಸಿಕೊಡುವುದು ಒಂದು ಮುಖ್ಯ ಧ್ಯೇಯೋದ್ಧೇಶವಾಗಿದೆ. ನಮ್ಮ ರಾಜ್ಯದಲ್ಲಿ ಹಲವಾರು ಸ್ವಾಯತ್ತ ಸಂಸ್ಥೆಗಳು/ಸರ್ಕಾರಿ ಇಲಾಖೆಗಳು ಜನ ಜೀವನ ಗುಣಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಅವರುಗಳ ಧ್ಯೇಯೋದ್ಧೇಶಗಳ ಅನ್ವಯ ವಿವಿಧ ಮಹತ್ವಕಾಂಶೆಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವುದು ನಮಗೆ ತಿಳಿದ ವಿಚಾರವಾಗಿದೆ. ಇಂತಹ ಸಂಸ್ಥೆಗಳಿಗೆ ಬೆಂಗಳೂರಿನಲ್ಲಿ ಅಥವಾ ಕರ್ನಾಟಕದ ಇನ್ನಾವುದೇ ಭಾಗದಲ್ಲಿ, ಸದ್ಯದ ಅವಶ್ಯಕತೆ ಅಥವಾ ಮುಂದಿನ ವಿಸ್ತರಣಾ ಯೋಜನೆಗಳಿಗಾಗಿ ಸರ್ಕಾರಿ ಜಮೀನುಗಳಿಗೆ ಕೋರಿಕೆ ಸಲ್ಲಿಸುತ್ತಿರುವುದನ್ನು ನಾವು ದಿನನಿತ್ಯ ನೋಡುತ್ತಿದ್ದೇವೆ. ಆದ್ದರಿಂದ ಸರ್ಕಾರಿ ಇಲಾಖೆಗಳು/ಸ್ವಾಯತ್ತ ಸಂಸ್ಥೆಗಳ ಜಮೀನುಗಳ ಅವಶ್ಯಕತೆಗಳನ್ನು ತ್ವರಿತವಾಗಿ ನೀಗಿಸುವ ನಿಟ್ಟಿನಲ್ಲಿ, ಕೋರಿಕೆ ಸಂಸ್ಥೆಯ ಅವಶ್ಯಕತೆ/ಬೇಡಿಕೆಗೆ ಅನುಗುಣವಾಗಿ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು, ಮಂಜೂರಾತಿ ಬಗ್ಗೆ ಸರ್ಕಾರಿ ಆದೇಶ ಹೊರಡಿಸುವವರೆಗಿನ ವಿವಿಧ ಹಂತಗಳಲ್ಲಿ ಕೆ.ಪಿ.ಎಲ್.ಸಿ. ನೆರವು ನೀಡಬಹುದಾಗಿದೆ. ಇದರಿಂದ, ಕೋರಿಕೆ ಸಂಸ್ಥೆಗಳು ಕಛೇರಿಯಿಂದ ಕಛೇರಿಗಳಿಗೆ ಹೋಗುವುದನ್ನು ತಪ್ಪಿಸಬಹುದಾಗಿದೆ. ಸಂಬಂಧಪಟ್ಟ ಸಂಸ್ಥೆಗಳು ಜನ ಸಾಮಾನ್ಯರಿಗೆ ತಲುಪಿಸಬೇಕಾದ ಯೋಜನೆಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಿದಂತಾಗುತ್ತದೆ. ಈ ರೀತಿಯ ಚಟುವಟಿಕೆಗಳಿಂದ ಲಭ್ಯವಿರುವ ಸರ್ಕಾರಿ ಜಮೀನುಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವುದರ ಮೂಲಕ ಕೆ.ಪಿ.ಎಲ್.ಸಿ. ತನ್ನ ಧ್ಯೇಯೋದ್ಧೇಶ ನೆರವೇರಿಸುವಂತಾಗುತ್ತದೆ. ಈ ರೀತಿಯ ಸೇವೆ ಒದಗಿಸುವುದಕ್ಕಾಗಿ ಕೋರಿಕೆ ಸಂಸ್ಥೆಯವರು ಕೆ.ಪಿ.ಎಲ್.ಸಿ.ಗೆ ನಿಗದಿತ ಸೇವಾ ಶುಲ್ಕ ನೀಡುವಂತೆ ಸಹ ನಿಬಂಧನೆ ವಿಧಿಸಬಹುದಾಗಿದೆ. ಇದರಿಂದ ಈ ನಿಗಮಕ್ಕೆ/ಸರ್ಕಾರಕ್ಕೆ ಸ್ವಲ್ಪ ಮಟ್ಟಿನ ಆದಾಯ ಬಂದಂತೆಯೂ ಆಗುತ್ತದೆ. ಈ ದಿಸೆಯಲ್ಲಿ ಈ ನಿಗಮದ ಪ್ರಸ್ತಾವನೆ ಪತ್ರದಲ್ಲಿ ತಿಳಿಸಿರುವಂತೆ ಅಧಿಕಾರ ಹಾಗೂ ಕರ್ತವ್ಯಗಳನ್ನು ನಿಗಡಿಪಡಿಸುವ ಅವಶ್ಯಕತೆ ಇದೆ.

7. ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸುವ ಪ್ರಕ್ರಿಯೆ ಚುರುಕುಗೊಳಿಸುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಸಾರ್ವಜನಿಕ ರಿಟ್ ಅಜಿ ಕ್ರಮಾಂಕ: 15500/2013 ಮತ್ತು 15511-14/2013 ದಾಖಲಾಗಿದ್ದು, ವಿಚಾರಣೆ ನಡೆಯುತ್ತಿದೆ. ಈ ಸಂಬಂಧವಾಗಿ ಸರ್ಕಾರದ ಸುತ್ತೋಲೆ ಕ್ರಮಾಂಕ: ಕ್ರಮಾಂಕ: ಆರ್‌ಡಿ/155/ಎಲ್‌ಜಿಎಕ್ಸ್/2013, ದಿನಾಂಕ: 23.12.2013 ಹಾಗೂ ಸರ್ಕಾರದ ಅದೇಶ ಸಂಖ್ಯೆ ಆರ್‌ಡಿ/155/ಎಲ್‌ಜಿಎಕ್ಸ್/2013, ದಿನಾಂಕ: 19.08.2014 ರಲ್ಲಿ ಸರ್ಕಾರಿ ಜಮೀನು ಒತ್ತುವರಿ ತೆರವು ಪ್ರಕ್ರಿಯೆಗಳನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕೆಲವೊಂದು ನಿರ್ದಿಷ್ಟ ಸೂಚನೆಗಳನ್ನು ನೀಡಲಾಗಿದ್ದು, ಜಿಲ್ಲೆಗಳಲ್ಲಿ ಸರ್ಕಾರಿ ಜಮೀನು ಒತ್ತುವರಿ ಕಾರ್ಯದಲ್ಲಿ ಸಾಧಿಸಿದ ಪ್ರಗತಿಯನ್ನು ಕ್ರೋಢೀಕರಿಸಿ ಸಕಾರಕ್ಕೆ ಸಲ್ಲಿಸುವ ಮೂಲಕ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವನ್ನು ಸಮನ್ವಯ ಪ್ರಾಧಿಕಾರವಾಗಿ ಕಾರ್ಯ ನಿರ್ವಹಿಸುತ್ತಿದೆ. ಆದರೆ ಕೆಲವೊಂದು ಜಿಲ್ಲೆಗಳಲ್ಲಿ ನಿಗದಿಪಡಿಸಿದಂತೆ ಪ್ರಗತಿಯಾಗುತ್ತಿಲ್ಲ. ಪ್ರಗತಿ ಪತ್ರಿಕೆಗಳನ್ನು ನಿಗದಿತ ಸಮಯದಲ್ಲಿ ಸಲ್ಲಿಸುತ್ತಿಲ್ಲ. ಜಿಲ್ಲಾಡಳಿತಗಳಿಂದ ಒದಗಿಸುತ್ತಿರುವ ಮಾಹಿತಿಗಳನ್ನು ವಿವಿಧ ಸ್ವರೂಪಗಳಲ್ಲಿ ಗಮನಿಸಿದಾಗ ಒಂದಕ್ಕೊಂದು ತಾಳೆಯಾಗುತ್ತಿಲ್ಲ. ಸರ್ಕಾರಿ ಜಮೀನುಗಳ ವಿವಿಧ ಮಾಹಿತಿಗಳ ಮಹತ್ವಗಳನ್ನು ಹಾಗೂ ವ್ಯವಾಗುತ್ತಿರುವ ನ್ಯೂನ್ಯತೆಗಳನ್ನು ಸಕಾಲದಲ್ಲಿ ಸರಿಪಡಿಸಿಕೊಳ್ಳಬೇಕಾದ ಅಂಶವನ್ನು ಅನುಷ್ಠಾನಾದಿಕಾರಿಗಳಿಗೆ ಸೂಕ್ತವಾಗಿ ಮನವರಿಕೆ ಮಾಡಿ, ಸಮನ್ವಯ ಹಾಗೂ ಖಚಿತ ಪರಿಶೀಲನೆ ಮೂಲಕ ಲೆಕ್ಕಾಚಾರಗಳನ್ನು ಸರಿಪಡಿಸಿಕೊಂಡು, ಒದಗಿಸುವ ಮಾಹಿತಿಗೂ, ಕ್ಷೇತ್ರದಲ್ಲಿನ

ವಾಸ್ತವಾಂಶಗಳಿಗೂ ವ್ಯತ್ಯಾಸವಿರದಂತೆ ಜಾಗೃತವಾಗಿರುವುದು ಅವಶ್ಯಕ. ಈ ಎಲ್ಲಾ ಪ್ರಕ್ರಿಯೆಗಳನ್ನು ಆಗಿಂದಾಗ್ಗೆ ಅವಲೋಕಿಸಿ, ಸೂಕ್ತ ಕ್ರಿಯಾ ಯೋಜನೆಗಳನ್ನು ತಯಾರು ಮಾಡಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಈ ನಿಗಮದ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಕರ್ತವ್ಯ ಹಾಗೂ ಅಧಿಕಾರ ನೀಡುವ ಅವಶ್ಯಕತೆ ಇದೆ.

8. ಭೂಮಿಯ ಬೆಲೆ ದಿನೇದಿನೇ ಏರುತ್ತಿರುವುದರಿಂದ ಹಲವಾರು ವ್ಯಕ್ತಿಗಳು ಕೆಳ ನ್ಯಾಯಾಲಯ ಮತ್ತು ಉನ್ನತ ನ್ಯಾಯಾಲಯಗಳಲ್ಲಿ ದಾವೆಗಳನ್ನು ಹೂಡುತ್ತಿದ್ದು, ಕ್ಲೇಮು ಮಾಡಿರುವ ಸರ್ಕಾರಿ ಜಮೀನು ಅವರ ಸ್ವಂತದ್ದು, ಅವರಿಗೆ ಮಂಜೂರಾಗಿದೆ, ಸದರಿ ಜಮೀನು ಸರ್ಕಾರಿ ಜಮೀನೇ ಅಲ್ಲ ಅಥವ ಕೆರೆ, ಕಟ್ಟೆ ಮುಂತಾದ ಸಮುದಾಯಿಕ ಜಮೀನಿಗೆ ಒಳಪಟ್ಟಿಲ್ಲ, ಸದರಿ ಜಮೀನಿನಲ್ಲಿ ಪ್ರತಿಕೂಲ ಸ್ವಾಧೀನ ಲಭಿಸಿದೆ ಎಂಬಿತ್ಯಾದಿ ಕಾರಣಗಳ ಮೇಲೆ ಅಂತಹ ಜಮೀನುಗಳ ಹಕ್ಕುದಾರಿಕೆಯನ್ನು ಅವರುಗಳ ಹೆಸರಿಗೆ ಖಾಯಂಗೊಳಿಸಲು ಹಾಗೂ ಸರ್ಕಾರದ ವಿರುದ್ಧ ಪ್ರತಿಬಂಧಕಾಜ್ಞೆ ಆದೇಶ ಹೊರಡಿಸಲು ಕೋರುತ್ತಿದ್ದಾರೆ. ಇಂತಹ ಪ್ರಕರಣಗಳಲ್ಲಿ ಸಾಮಾನ್ಯವಾಗಿ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ಮತ್ತು ತಹಸೀಲ್ದಾರ್ ಇವರುಗಳನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿರುತ್ತದೆ. ಈ ರೀತಿ ಸರ್ಕಾರಿ ಜಮೀನುಗಳಿಗೆ ಸಂಬಂಧಪಟ್ಟಂತೆ ಹೂಡಿರುವ ವ್ಯಾಜ್ಯಗಳಲ್ಲಿ ಸರ್ಕಾರದ ಪರವಾಗಿ ಪ್ರಕರಣವನ್ನು ಪ್ರತಿನಿಧಿಸುತ್ತಿಲ್ಲ, ಪರಿಣಾಮಕಾರಿಯಾಗಿ ಸಮರ್ಥಿಸಿಕೊಳ್ಳುತ್ತಿಲ್ಲ ಹೀಗಾಗಿ ಸರ್ಕಾರದ ವಿರುದ್ಧವಾಗಿ ಎಕ್ಸ್‌ಪಾರ್ಟಿ ತೀರ್ಮಾನಗಳು ನ್ಯಾಯಾಲಯಗಳಿಂದ ಬರುತ್ತಿರುವುದನ್ನು ಗಮನಿಸಲಾಗಿದೆ. ಈ ರೀತಿಯ ಪ್ರಕರಣಗಳನ್ನು ಪ್ರತಿ ಹಂತದಲ್ಲಿ ಅತಿ ಜಾಗರೂಕತೆಯಿಂದ ಪ್ಯಾನೆಲ್ ವಕೀಲರ ನೆರವು ಮತ್ತು ಕ್ಷೇತ್ರಮಟ್ಟದ ಅಧಿಕಾರಿಗಳ ಸಮನ್ವಯದೊಂದಿಗೆ ಪ್ರಕರಣಗಳನ್ನು ಬೆಂಬತ್ತಿ ಪರಿಣಾಮಕಾರಿಯಾಗಿ ನಿರ್ವಹಿಸಿ, ಸರ್ಕಾರದ ಹಿತಾಸಕ್ತಿಗೆ ಧಕ್ಕೆಯಾಗದಂತೆ ಜಾಗ್ರತೆಯಿಂದ ನಿರ್ವಹಿಸುವ ಅಗತ್ಯತೆ ಬಹಳವಾಗಿ ಇದೆ. ಇದರ ಗಂಭೀರತೆಯ ಹಿನ್ನೆಲೆಯಲ್ಲಿ, ಸರ್ಕಾರಿ ಜಮೀನುಗಳಿಗೆ ಸಂಬಂಧಪಟ್ಟಂತೆ ನ್ಯಾಯಾಲಯ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ಸಮರ್ಥಿಸಿಕೊಳ್ಳುವ ನಿಟ್ಟಿನಲ್ಲಿ, ಸರ್ಕಾರಿ ಜಮೀನುಗಳಿಗೆ ಸಂಬಂಧಪಟ್ಟಂತೆ ದಾಖಲಾಗಿರುವ ಎಲ್ಲಾ ನ್ಯಾಯಾಲಯ ಪ್ರಕರಣಗಳಲ್ಲಿ, ಕೆಪಿಎಲ್‌ಸಿ ಪ್ಯಾನೆಲ್ ವಕೀಲರನ್ನು ಸಂದರ್ಭಾನುಸಾರ ಸರ್ಕಾರ ಮತ್ತು ಇನ್ನಿತರ ಸರ್ಕಾರಿ ಅಧಿಕಾರಿಗಳ ಪರವಾಗಿ ನೇಮಿಸಲು ಕ್ರಮ ಜರುಗಿಸುವುದು. ನೇಮಕ ಮಾಡಿದ ವಕೀಲರಿಗೆ ಪ್ರಕರಣಕ್ಕೆ ಸಂಬಂಧಪಟ್ಟ ಅಗತ್ಯ ಮಾಹಿತಿಗಳನ್ನು ಒದಗಿಸುವ ಪೂರ್ಣ ಅಧಿಕಾರ ನೀಡುವುದು ಅಗತ್ಯ.

9. ಸರ್ಕಾರಿ ಜಮೀನು ಒತ್ತುವರಿ ತೆರವು ಹಾಗೂ ಸಂರಕ್ಷಣೆ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ನಿಗದಿತ ಕಾಲಾವಧಿಯಲ್ಲಿ ಗುರಿ ಸಾಧನೆ ಮಾಡಬೇಕಾಗುತ್ತದೆ. ಈ ಬಗ್ಗೆ ನೀಡುವ ಸೂಚನೆಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಉದಾಸೀನ ತೋರುವವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಮೂಲಕ ಅನುಷ್ಠನಾಧಿಕಾರಿಗಳಲ್ಲಿ ಅಗತ್ಯ ಶ್ರದ್ಧಾ ಮನೋಭಾವ, ಅವರುಗಳ ಜವಬ್ದಾರಿ ಬಗ್ಗೆ ಅರಿವು ಹೆಚ್ಚಿಸುವುದು ಹಾಗೂ ಶಿಸ್ತು ಮೂಡಿಸುವುದು ಅಗತ್ಯವಿದೆ. ಇದಕ್ಕೆ ಪೂರಕವಾಗಿ ಈ ನಿಗಮ ಹತೋಟಿ ಮತ್ತು ನಿಯಂತ್ರಣಾ ಕಾರ್ಯವನ್ನು ಸಹ ನಿರ್ವಹಿಸಬೇಕಾಗುತ್ತೆ. ಈ ನಿಟ್ಟಿನಲ್ಲಿ ಪ್ರಸ್ತಾವನೆ ಪತ್ರದಲ್ಲಿ ತಿಳಿಸಿದಂತೆ ಈ ನಿಗಮವನ್ನು ಅಧಿಕಾರಯುತಗೊಳಿಸುವುದು ಅವಶ್ಯಕ.

10. ಇಷ್ಟೇ ಅಲ್ಲದೆ, ನ್ಯಾಯಾಲಯ ಪ್ರಕರಣಗಳಲ್ಲಿ ಒಳಗೊಂಡಿರುವ ಸರ್ಕಾರಿ ಜಮೀನುಗಳು, ನಿಯಮ ಬಾಹಿರವಾಗಿ ಸಕ್ರಮಗೊಳಿಸಿರುವ ಪ್ರಕರಣಗಳು, ಸಕ್ರಮೀಕರಣ ಕೋರಿ ಬಾಕಿ ಇರುವ ಅನರ್ಹ ಪ್ರಕರಣಗಳ ಅರ್ಜಿಗಳ ಶೀಘ್ರ ವಿಲೇವಾರಿ, ವಿವಿಧ ನ್ಯಾಯಲಯಗಳಲ್ಲಿ ಸರ್ಕಾರದ ಹಿತಾಸಕ್ತಿಗೆ ವ್ಯತಿರಿಕ್ತವಾಗಿ ಆಗಿರಬಹುದ ಏಕಪಕ್ಷೀಯ ಆದೇಶಗಳನ್ನು ಪತ್ತೆಹಚ್ಚಿ ಮುಂದಿನ ಕ್ರಮಗಳನ್ನು ಜರುಗಿಸಿ ಸರ್ಕಾರಿ ಜಮೀನುಗಳನ್ನು ಹಿಂಪಡೆಯುವುದು, ಸಂರಕ್ಷಿಸುವುದು ಹಾಗೂ ಅಭಿವೃದ್ದಿಪಡಿಸಿ ಸರ್ಕಾರಕ್ಕೆ ರಾಜಸ್ವ ತರುವಂತಹ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು ಮುಂತಾದ ವಿವಿಧ ಪ್ರಕ್ರಿಯೆಗಳನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ಈ ನಿಗಮ ಸಾಕಷ್ಟು ಅಧಿಕಾರ ಹಾಗೂ ಕರ್ತವ್ಯಗಳನ್ನು ಹೊಂದಿ ಬಲಿಷ್ಠವಾಗಿರಬೇಕಾಗಿರುತ್ತದೆ.

ಪ್ರಸ್ತಾವನೆ ಪತ್ರದಲ್ಲಿ ವಿವರಿಸಿರುವಂತೆ ಕೆಲವೊಂದು ಅಧಿಕಾರ ಹಾಗೂ ಕರ್ತವ್ಯಗಳನ್ನು ಈ ನಿಗಮಕೆಕ ನೀಡುವುದರಿಂದ ಅನುಷ್ಠಾನಾಧಿಕಾರಿಗಳಿಗೂ ಸಹ ಈ ನಿಗಮದೊಂದಿಗೆ ಸಹಕರಿಸಲು ಅನುವಾಗುತ್ತದೆ ಹಾಗೂ ಸಾಕಷ್ಟು ಪ್ರಗತಿ ಸಾಧಿಸಬಹುದಾಗಿದೆ.

ಮೇಲೆ ವಿವರಿಸಿರುವ ಸಂದರ್ಭ ಹಾಗೂ ವಿವರಣೆಗಳ ಹಿನ್ನಲೆಯಲ್ಲಿ, ಸರ್ಕಾರಿ ಜಮೀನು ಒತ್ತುವರಿ ತೆರವು ಪ್ರಕ್ರಿಯೆ ಇನ್ನಷ್ಟು ತೀವ್ರಗೊಳಿಸುವುದು, ಕಬಳಿಕೆಯಾಗಿರುವ ಸರ್ಕಾರಿ ಜಮೀನುಗಳನ್ನು ಹಿಂಪಡೆಯಲು ಎಲ್ಲಾ ಅಗತ್ಯ ಕ್ರಮಗಳನ್ನು ಜರುಗಿಸುವುದು, ಒತ್ತುವರಿಯಿಂದ ಹಿಂಪಡೆದ ಸರ್ಕಾರಿ ಜಮೀನುಗಳು ಹಾಗೂ ಒತ್ತುವರಿಯಿಂದ ಮುಕ್ತವಾಗಿರುವ ಸರ್ಕಾರಿ ಜಮೀನುಗಳು ಭವಿಷ್ಯದಲ್ಲಿ ಒತ್ತುವರಿಯಾಗದಂತೆ ತಡೆಗಟ್ಟಲು ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು, ಮತ್ತು ಅಂತಹ ಜಮೀನುಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವುದು, ಸರ್ಕಾರಿ ಇಲಾಖೆಗಳು/ಸರ್ಕಾರಿ ಸಂಸ್ಥೆಗಳಿಗೆ ಸರ್ಕಾರಿ ಜಮೀನಿನ ಹಂಚಿಕೆ ಮುಂತಾದ ಕಾರ್ಯ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಈ ನಿಗಮದ ಪ್ರಮುಖ ದ್ಯೇಧ್ಧೇಶಗಳನ್ನು ನೆರವೇರಿಸುವ ದಿಸೆಯಲ್ಲಿ ಈ ನಿಗಮದಿಂದ ಉಲ್ಲೇಖ(1)ರ ದಿನಾಂಕ: 27.05.2015ರ ಪತ್ರದಲ್ಲಿ ಈ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಹಾಗೂ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು ಎಂದು ಪದನಮೀಕರಿಸಲು ಈಗಾಗಲೇ ಕೋರಿರುವುದಕ್ಕೆ ಪೂರಕವಾಗಿ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಈ ಮುಂದಿನಂತೆ ಸ್ಪಷ್ಟ ಹಾಗೂ ನಿರ್ದಿಷ್ಟ ಕರ್ತವ್ಯಗಳನ್ನು ನಿಗದಿಪಡಿಸುಲು ಕೋರಿದೆ.

**(1) ಕರ್ನಾಟಕ ರಾಜ್ಯಾದ್ಯಾಂತ ಸರ್ಕಾರಿ ಜಮೀನುಗಳ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಸೂಚನೆ ನೀಡುವುದು ಮತ್ತು ಈ ಕಾರ್ಯದಲ್ಲಿ ಮೇಲ್ವಿಚಾರಣೆ ಮಾಡುವುದು.**

**(2) ಸರ್ಕಾರಿ ಜಮೀನುಗಳ ಸಂರಕ್ಷಣೆ ಮತ್ತು ಅಭಿವೃದ್ದಿಪಡಿಸುವ ಬಗ್ಗೆ ಮೇಲ್ವಿಚಾರಣೆ ಹಾಗೂ ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ಸೂಚನೆ/ನಿರ್ದೇಶನಗಳನ್ನು ನೀಡುವುದು ಹಾಗೂ ಒತ್ತುವರಿ ಗುರುತಿಸಿ, ತೆರವುಗೊಳಿಸುವ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಕ್ರಿಯಾ ಯೋಜನೆ ರೂಪಿಸಿ ಅದನ್ನು ಅನುಷ್ಠಾನಗೊಳಿಸುವುದು, ಒತ್ತುವರಿಯಿಂದ ಹಿಂಪಡೆದ ಜಮೀನುಗಳು ಹಾಗೂ ಒತ್ತುವರಿಯಿಂದ ಮುಕ್ತವಾಗಿರುವ ಸರ್ಕಾರಿ ಜಮೀನುಗಳು ಭವಿಷ್ಯದಲ್ಲಿ ಒತ್ತುವರಿಯಾಗದಂತೆ ಕ್ರಮ ಕೈಗೊಳ್ಳುವ ಪೂರ್ಣ ಅಧಿಕಾರ.**

**(3) ಸರ್ಕಾರಿ ಜಮೀನುಗಳ ಒತ್ತುವರಿ ತೆರವುಗೊಳಿಸುವ ಬಗ್ಗೆ ಕಂದಾಯ ಇಲಾಖೆ ಸಿಬ್ಬಂಧಿಗೆ ಅಗತ್ಯ ಮೂಲ ಭೂತ ಸೌಲಭ್ಯಗಳನ್ನು ನೀಡುವ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುವುದು.**

**(4) ಸರ್ಕಾರಿ ಜಮೀನುಗಳನ್ನು ಹರಾಜು ಮಾಡುವುದು/ಮಾರಾಟ ಮಾಡುವುದು/ಗುತ್ತಿಗೆಗೆ ನೀಡುವುದು ಅಥವ ಇನ್ಯಾವುದೇ ರೀತಿಯಲ್ಲಿ ವ್ಯವಹರಣೆ ಮಾಡುವ ಬಗ್ಗೆ ನಿರ್ಣಯಿಸುವುದು, ಸರ್ಕಾರಿ ಇಲಾಖೆಗಳು/ಸರ್ಕಾರಿ ಸಂಸ್ಥೆಗಳ ಸರ್ಕಾರಿ ಜಮೀನು ಬೇಡಿಕೆಯನ್ನು ನೀಗಿಸುವಲ್ಲಿ ಜಿಲ್ಲಾಡಳಿತ ಮತ್ತು ಸರ್ಕಾರದ ಮಧ್ಯೆ ಸಮನ್ವಯ ಕಾರ್ಯ ನಿರ್ವಹಿಸುವುದು.**

**(5) ಸರ್ಕಾರಿ ಜಮೀನುಗಳ ಒತ್ತುವರಿ ತೆರವು ಮಾಡುವುದು ಮತ್ತು ಹರಾಜು/ಮಾರಾಟ ಮಾಡುವುದು/ಗುತ್ತಿಗೆಗೆ ನೀಡುವುದು ಅಥವ ಇನ್ಯಾವುದೇ ರೀತಿಯಲ್ಲಿ ವ್ಯವಹರಣೆ ಮಾಡುವಲ್ಲಿ ಉಂಟಾಗುವ ವೆಚ್ಚಗಳ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಸರ್ಕಾರದ ಮಂಜೂರಾತಿ ಆದ ಮೇಲೆ ಸದರಿ ವೆಚ್ಚಗಳನ್ನು ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪಾವತಿಸುವ ಪೂರ್ಣ ಅಧಿಕಾರ.**

**(6) ಸರ್ಕಾರಿ ಜಮೀನುಗಳ ಒತ್ತುವರಿ ಬಗ್ಗೆ ವಿವಿಧ ಜಿಲ್ಲೆಗಳ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳಲು ಅಗತ್ಯ ನಿರ್ಣಯಗಳನ್ನು ಕೈಗೊಳ್ಳುವುದು ಹಾಗೂ ಅದನ್ನು ಜಿಲ್ಲಾ ಮಟ್ಟದ ಅಧಿಕಾರಿಗಳ**

ಅನುಷ್ಠಾನಗೊಳಿಸಿ ಕಾಲಕಾಲಕ್ಕೆ ಸರ್ಕಾರಕ್ಕೆ ವರದಿ ಸಲ್ಲಿಸುವುದು. ಒತ್ತುವರಿ ತೆರವು ಕಾರ್ಯ ಅನುಷ್ಠಾನದ ಬಗ್ಗೆ ನಿಗದಿತ ನಮೂನೆಗಳಲ್ಲಿ ನಿಗಮಕ್ಕೆ ವರದಿಗಳನ್ನು ತರಿಸಿಕೊಳ್ಳುವ ಪೂರ್ಣ ಅಧಿಕಾರ.

(7) ಸರ್ಕಾರಿ ಜಮೀನುಗಳಿಗೆ ಸಂಬಂಧಪಟ್ಟಂತೆ ನ್ಯಾಯಾಲಯ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ಸಮರ್ಥಿಸಿಕೊಳ್ಳುವ ನಿಟ್ಟಿನಲ್ಲಿ, ಸರ್ಕಾರಿ ಜಮೀನುಗಳಿಗೆ ಸಂಬಂಧಪಟ್ಟಂತೆ ದಾಖಲಾಗಿರುವ ಎಲ್ಲಾ ನ್ಯಾಯಾಲಯ ಪ್ರಕರಣಗಳಲ್ಲಿ, ಕೆಪಿಎಲ್‌ಸಿ ಪ್ಯಾನೆಲ್ ವಕೀಲರನ್ನು ಸಂದರ್ಭಾನುಸಾರ ಸರ್ಕಾರ ಮತ್ತು ಇನ್ನಿತರ ಸರ್ಕಾರಿ ಅಧಿಕಾರಿಗಳ ಪರವಾಗಿ ನೇಮಿಸಲು ಕ್ರಮ ಜರುಗಿಸುವುದು. ನೇಮಕ ಮಾಡಿದ ವಕೀಲರಿಗೆ ಪ್ರಕರಣಕ್ಕೆ ಸಂಬಂಧಪಟ್ಟ ಅಗತ್ಯ ಮಾಹಿತಿಗಳನ್ನು ಒದಗಿಸುವ ಪೂರ್ಣ ಅಧಿಕಾರ ಹಾಗೂ ಅಗತ್ಯವಿರುವ ಪ್ರಕರಣಗಳಲ್ಲಿ ನಿಗಮದ ಮೂಲಕ ಖಾಸಗಿ ವಕೀಲರನ್ನು ನೇಮಕ ಮಾಡಿಕೊಳ್ಳುವ ಪೂರ್ಣ ಅಧಿಕಾರ.

(8) ಸರ್ಕಾರಿ ಜಮೀನುಗಳ ಒತ್ತುವರಿ ತೆರವು/ಸಂರಕ್ಷಣೆ/ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಹಾಗೂ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮದಿಂದ ನೀಡಲಾದ ಸುತ್ತೋಲೆ/ಸೂಚನೆ/ನಿರ್ದೇಶನಗಳನ್ನು ಪಾಲಿಸದೇ ವಿಫಲರಾಗುವುವ ಅಧಿಕಾರಿಗಳ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಪೂರ್ಣ ಅಧಿಕಾರ.

(9) ಸರ್ಕಾರಿ ಜಮೀನು ಒತ್ತುವರಿ ಬಗ್ಗೆ ಸ್ವೀಕೃತವಾಗುವ ದೂರುಗಳ ಬಗ್ಗೆ ಪರಿಶೀಲನೆ ಮಾಡಿ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಂಡು ದೂರುಗಳನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಇತ್ಯರ್ಥಪಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವುದು.

(10) ಸರ್ಕಾರಿ ಜಮೀನುಗಳ ಒತ್ತುವರಿ ತೆರವುಗೊಳಿಸಲು, ಸಂರಕ್ಷಿಸಲು, ಅಭಿವೃದ್ಧಿಗೊಳಿಸಲು ಹಾಗೂ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಅಗತ್ಯವಾದ ಎಲ್ಲಾ ಕ್ರಮಗಳನ್ನು ಜರುಗಿಸುವ ಬಗ್ಗೆ ಪೂರ್ಣ ಅಧಿಕಾರ.

ತಮ್ಮ ವಿಶ್ವಾಸಿ,
ಸಹಿ/-
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ನಿ

ಪ್ರತಿಯನ್ನು ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ರವರಿಗೆ ಕಳುಹಿಸುತ್ತಾ ಈ ವಿಚಾರವನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಲು ಕೋರಿದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರ ಪರವಾಗಿ,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ,ನಿ.